ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

ದೂರವಾಣಿ: 22352579

ರಾಜಮ್ಮ ಎ. ಚೌಡಾರೆಡ್ಡಿ
ನಿರ್ದೇಶಕರು(ಪ್ರ)
ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕೊಠಡಿ ಸಂ.126, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು-1

ಪತ್ರ ಸಂಖ್ಯೆ: KSA-12015/17/2019 HRS ದಿನಾಂಕ: 10-11-2020

ರವರಿಗೆ:

ವಿಶ್ವವಿದ್ಯಾನಿಲಯಗಳ ಕುಲಸಚಿವರಿಗೆ,
ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಹಾಗೂ
ವಿವಿಧ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಮಾನ್ಯರೇ,

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರಕಟಣಾ ಕಾರ್ಯಕ್ರಮಕ್ಕಾಗಿ SCSP/TSP ಯೋಜನೆಯಡಿ ಅನುದಾನ ನೀಡುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು 2020-21ನೇ ಸಾಲಿನ SCSP/TSP ಕ್ರಿಯಾ ಯೋಜನೆಯಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಅಭಿವೃದ್ಧಿ ದೃಷ್ಟಿಯಿಂದ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇದಕ್ಕಾಗಿ ಅನುದಾನವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಅದರಂತೆ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ Ph.d. ವಿದ್ಯಾರ್ಥಿಗಳಿಗೆ ಪುಸ್ತಕ ಪ್ರಕಟಣೆಗಾಗಿ ಇಲಾಖೆಯಿಂದ ಅನುದಾನ ಪಡೆಯಲು ಪ್ರಸ್ತಾವನೆಗಳನ್ನು ಸಲ್ಲಿಸಲು ಕೋರಲಾಗಿದೆ.

**A. <u>ಐತಿಹಾಸಿಕ/ಸಾಮಾಜಿಕ/ಧಾರ್ಮಿಕ ಸ್ಥಳಗಳು/ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ದಾಖಲೀಕರಣ ಕಾರ್ಯಕಮ:</u>**

| ಕ್ರಮ ಸಂ. | ಯೋಜನೆಯ ಹೆಸರು | ಅನುದಾನ | ಷರಾ |
|---|---|---|---|
| 1 | ಐತಿಹಾಸಿಕ/ ಸಾಮಾಜಿಕ/ ಧಾರ್ಮಿಕ ಸ್ಥಳಗಳು/ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ದಾಖಲೀಕರಣ. .(ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ)) | ಪುಸ್ತಕ ಪ್ರಕಟಣೆಗೆ ರೂ.25,000/- ರಂತೆ. | 50 ಪುಸ್ತಕಗಳನ್ನು ಸಾಫ್ಟ್ ಪ್ರತಿಯೊಂದಿಗೆ ಮೂರು ತಿಂಗಳೊಳಗೆ ಇಲಾಖೆಗೆ ಸಲ್ಲಿಸುವುದು. |
| 2. | ಐತಿಹಾಸಿಕ/ ಸಾಮಾಜಿಕ/ ಧಾರ್ಮಿಕ ಸ್ಥಳಗಳು/ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ದಾಖಲೀಕರಣ. ( ಗಿರಿಜನ ಸಂಬಂಧಿಸಿದಂತೆ) | ಪುಸ್ತಕ ಪ್ರಕಟಣೆಗೆ ರೂ.25,000/- ರಂತೆ. | 50 ಪುಸ್ತಕಗಳನ್ನು ಸಾಫ್ಟ್ ಪ್ರತಿಯೊಂದಿಗೆ ಮೂರು ತಿಂಗಳೊಳಗೆ ಇಲಾಖೆಗೆ ಸಲ್ಲಿಸುವುದು. |

**<u>ಪ್ರಸ್ತಾವನೆಗಳ ಸ್ವೀಕೃತಿ :-</u>**

ಪ್ರಕಟಣೆ ಕಾರ್ಯಕ್ಕಾಗಿ ಇಲಾಖೆಯ ನಾಲ್ಕು ವಿಭಾಗಳಿಗೆ ಪ್ರಸ್ತಾವನೆ/ಅರ್ಜಿಗಳನ್ನು ಸ್ವೀಕರಿಸಲಾಗುವುದು. ಮೈಸೂರು ವಿಭಾಗದ ಜಿಲ್ಲೆಗಳಿಂದ ಬರುವ ಪಸ್ತಾವನೆಗಳನ್ನು ವಿಭಾಗಿಯ ಕಛೇರಿ ಮೈಸೂರು. ಬೆಳಗಾವಿ ವಿಭಾಗದ ಜಿಲ್ಲೆಗಳಿಂದ ಬರುವ ಪಸ್ತಾವನೆಗಳನ್ನು ಪ್ರಾದೇಶಿಕ ಕಛೇರಿ ಧಾರವಾಡ, ಬೆಂಗಳೂರು ಮತ್ತು ಕಲಬುರ್ಗಿ ವಿಭಾಗದ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿ ಬೆಂಗಳೂರಿನಲ್ಲಿ

ಪಿ.ಟಿ.ಒ.

ಸ್ವೀಕರಿಸಲಾಗುವುದು. ಕಾರ್ಯಕ್ರಮಗಳಿಗೆ ಅನುದಾನ ನೀಡುವ ಬಗ್ಗೆ ಇಲಾಖೆಯ ವೈಬ್ ಸೈಟ್ ನಲ್ಲಿ ಸಹ ಪ್ರಕಟಿಸಲಾಗುವುದು.

**ದಾಖಲೀಕರಣದ ಪ್ರಸ್ತಾವನೆ ಸಲ್ಲಿಸಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ:**

1. ಪ್ರಕಟಣೆಗಳು ಖಡ್ಡಾಯವಾಗಿ ಪರಿಶಿಷ್ಟಜಾತಿ ಮತ್ತು ಗಿರಿಜನ ಉಪಯೋಜನೆಗೆ ಸಂಬಂಧಿಸಿರಬೇಕು. ಪರಿಶಿಷ್ಟ ಜಾತಿ ಮತ್ತು ಗಿರಿಜನ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಅನುದಾನ ಹಂಚಿಕೆ ಮಾಡಲಾಗುವುದು. ಪ್ರಕಟಣೆಯ 50 ಪುಸ್ತಕಗಳನ್ನು ಸಾಫ್ಟ್ ಪ್ರತಿಯೊಂದಿಗೆ ಪತ್ರಾಗಾರ ಿಲಾಖೆಗೆ ಸಲ್ಲಿಸುವುದು.
2. ಒಬ್ಬ ಲೇಖಕರಿಗೆ, ಒಂದು ಪುಸ್ತಕ ಪ್ರಕಟಣೆಗೆ ಒಮ್ಮೆ ಮಾತ್ರ ಅನುದಾನ ಹಂಚಿಕೆ ಮಾಡಲಾಗುವುದು. ಈ ಯೋಜನೆ ಅಡಿಯಲ್ಲಿ ಹಿಂದಿನ ವರ್ಷಗಳಲ್ಲಿ ಅನುದಾನ ಪಡೆದಿರುವವರಿಗೆ ಅವಕಾಶವಿರುವುದಿಲ್ಲ.
3. ಪುಸ್ತಕ ಪ್ರಕಟಿಸುವ ಮೊದಲು ಅದರ ಕರಡು ಪ್ರತಿಯನ್ನು ಪತ್ರಾಗಾರ ಇಲಾಖೆಯ ಅನುಮತಿಗೆ ಕಡ್ಡಾಯವಾಗಿ ಕಳುಹಿಸುವುದು.
4. ಪ್ರಕಟಣೆಯನ್ನು ಮೂಲ ದಾಖಲೆ ಅಂದರೆ ಪ್ರಾಥಮಿಕ ಆಧಾರಗಳನ್ನು ಹಾಗೂ ಆಕರಗಳನ್ನು ಆದರಿಸಿ ಪ್ರಕಟಿಸಬೇಕು.
5. ಪುಸ್ತಕದ ಮುಖಪುಟದಲ್ಲಿ " ರಾಜ್ಯ ಪತ್ರಾಗಾರ ಇಲಾಖೆ" ಎಂದು ದಾಕಲಿಸುವುದು ಹಾಗೂ ಪುಸ್ತಕಕ್ಕೆ ಇಲಾಖೆಯ ನಿರ್ದೇಶಕರ ಮುನ್ನುಡಿ/ಆಶಯ ನುಡಿಗಳನ್ನು ಬರೆಸುವುದು ಕಡ್ಡಾಯವಾಗಿರುತ್ತದೆ.
6. ಕಾರ್ಯಕ್ರಮ ಮುಗಿದ ತರುವಾಯ ವೆಚ್ಚದ ಮೊತ್ತಕ್ಕೆ ದೃಢೀಕರಿಸಿದ ಮೂಲ ರಸೀದಿಗಳೊಂದಿಗೆ ಉಪಯುಕ್ತತಾ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.
7. ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸುವುದು ಹಾಗೂ ಯಾವುದೇ ರೀತಿಯ ಹೆಚ್ಚಿನ ಅನುದಾನವನ್ನು ನೀಡಲಾಗುವುದಿಲ್ಲ.
8. ದಾಖಲೀಕರಣ ಕಾರ್ಯಕ್ರಮಗಳ ಎಲ್ಲಾ ವಿವರಗಳನ್ನು ಪತ್ರಾಗಾರ ನಿರ್ದೇಶನಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
9. ಕಾರ್ಯಕ್ರಮ ಆಯೋಜಿಸುವವರು ಸದರಿ ಕಾರ್ಯಕ್ರಮಕ್ಕೆ ಸರ್ಕಾರದ ಇನ್ನಿತರೆ ಯಾವುದೇ ಯೋಜನೆಗಳಿಂದ ಅನುದಾನ ಪಡೆದಿರುವುದಿಲ್ಲವೆಂದು ದೃಢೀಕರಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು.
10. ಕಾರ್ಯಕ್ರಮದ ಷರತ್ತುಗಳಿಗೆ ಒಪ್ಪಿ, ಒಪ್ಪಿಗೆ ಪತ್ರ ನೀಡದಲ್ಲಿ ಮಾತ್ರ ಸಂಸ್ಥೆಯ ಖಾತೆಗೆ ಹಣ ಜಮಾ ಮಾಡಲಾಗುವುದು. ( ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ.ಕೋಡ್ ಸಂಖ್ಯೆ, ಆಧಾರ್ ಕಾರ್ಡ್ ಸಂಖ್ಯೆ ಮತ್ತು ಬ್ಯಾಂಕಿನ ವಿಳಾಸ ಹಾಗೂ FORM -09ನ್ನು ಲಗತ್ತಿಸುವುದು).

B. **ಸಂಶೋಧನಾ ಪ್ರಕಟಣಾ ಕಾರ್ಯಕ್ರಮ:**

| ಕ್ರಮ ಸಂ. | ಯೋಜನೆಯ ಹೆಸರು | ಅನುದಾನ | ಷರಾ |
|---|---|---|---|
| 1 | ಪಿ.ಹೆಚ್.ಡಿ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಗೆ ಸಂಬಂಧಿಸಿದ ವ್ಯಕ್ತಿಗಳ ಸಂಶೋದನಾ ಪ್ರಬಂಧವನ್ನು ಪ್ರಕಟಿಸಲು ಅನುದಾನ ನೀಡಲಾಗುವುದು. | ಒಂದು ಸಂಶೋದನಾ ಕೃತಿ ಪ್ರಕಟಣೆಗೆ ರೂ.25,000/-ರಂತೆ. | ಮುದ್ರಿತ 50 ಪುಸ್ತಕಗಳು ಹಾಗೂ ಪುಸ್ತಕದ ಸಾಫ್ಟ್ ಪ್ರತಿಯನ್ನು ಮೂರು ಮೂರು ತಿಂಗಳೊಳಗೆ ಇಲಾಖೆಗೆ ಸಲ್ಲಿಸುವುದು. |
| 2. | ಪಿ.ಹೆಚ್.ಡಿ ವಿದ್ಯಾರ್ಥಿಗಳು ಪ.ಪಂಗಡಕ್ಕೆ ಸಂಬಂಧಿಸಿದ ವ್ಯಕ್ತಿಗಳ ಸಂಶೋದನಾ ಪ್ರಬಂಧವನ್ನು ಪ್ರಕಟಿಸಲು ಅನುದಾನ ನೀಡಲಾಗುವುದು. | ಒಂದು ಸಂಶೋದನಾ ಕೃತಿ ಪ್ರಕಟಣೆಗೆ ರೂ.25,000/-ರಂತೆ. | ಮುದ್ರಿತ 50 ಪುಸ್ತಕಗಳು ಹಾಗೂ ಪುಸ್ತಕದ ಸಾಫ್ಟ್ ಪ್ರತಿಯನ್ನು ಮೂರು ಮೂರು ತಿಂಗಳೊಳಗೆ ಇಲಾಖೆಗೆ ಸಲ್ಲಿಸುವುದು. |

**ಸಂಶೋಧನಾ ಪ್ರಕಟಣೆಗೆ ಪ್ರಸ್ತಾವನೆ ಸಲ್ಲಿಸಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ:**

1. ಪ್ರಕಟಣೆ ವಿಷಯಗಳು ಕಡ್ಡಾಯವಾಗಿ ಪರಿಶಿಷ್ಟಜಾತಿ ಮತ್ತು ಗಿರಿಜನ ಉಪಯೋಜನೆಗೆ ಸಂಬಂಧಿಸಿರಬೇಕು. ಪ್ರಿಶಿಷ್ಟ ಜಾತಿ ಮತ್ತು ಗಿರಿಜನ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಅನುದಾನ ಹಂಚಿಕೆ ಮಾಡಲಾಗುವುದು. ಪ್ರಕಟಣೆಯ 50 ಪುಸ್ತಕಗಳನ್ನು ಮತ್ತು ಅದರ ಸಾಫ್ಟ್ ಪ್ರತಿಯೊಂದಿಗೆ ಪತ್ರಾಗಾರ ಇಲಾಖೆಗೆ ಸಲ್ಲಿಸಬೇಕು.
2. ಸಂಶೋಧನಾ ಪ್ರಬಂಧಗಳ ಪ್ರಕಟಣೆಗೆ ಸಂಬಂಧಪಟ್ಟ ವಿಶ್ವ ವಿದ್ಯಾಲಯದ ಘಟಿಕೋತ್ಸವ ಪ್ರಮಾಣ ಪತ್ರ , ವಿಶ್ವ ವಿದ್ಯಾಲಯದಿಂದ ಪ್ರಬಂಧದ ಮೌಲ್ಯ ಮಾಪನ ವರದಿಗಳನ್ನು ಪುಸ್ತಕದಲ್ಲಿ ಪ್ರಕಟಿಸುವುದು.
3. ಪುಸ್ತಕ ಪ್ರಕಟುಸುವ ಮೊದಲು ಅದರ ಕರಡು ಪ್ರತಿಯನ್ನು ಇಲಾಖೆಯ ಅನುಮತಿಗೆ ಕಡ್ಡಾಯವಾಗಿ ಕಳುಹಿಸುವುದು.
4. ಒಂದು ಸಂಶೋಧನಾ ಪ್ರಬಂಧ ಪ್ರಕಟಣೆಗೆ ಒಮ್ಮೆ ಮಾತ್ರ ಅನುದಾನ ಹಂಚಿಕೆ ಮಾಡಲಾಗುವುದು. ಈ ಯೋಜನೆಯಡಿಯಲ್ಲಿ ಹಿಂದಿನ ವರ್ಷಗಳಲ್ಲಿ ಅನುದಾನ ಪಡೆದಿರುವವರಿಗೆ ಅವಕಾಶವಿರುವುದಿಲ್ಲ.
5. ಪುಸ್ತಕದ ಮುಖಪುಟದಲ್ಲಿ "ರಾಜ್ಯ ಪತ್ರಾಗಾರ ಇಲಾಖೆ" ಎಂದು ದಾಖಲಿಸುವುದು ಹಾಗೂ ಪುಸ್ತಕಕ್ಕೆ ಇಲಾಖೆಯ ನಿರ್ದೇಶಕರ ಮುನ್ನುಡಿ/ಆಶಯ ನುಡಿಗಳನ್ನು ಬರೆಸುವುದು ಕಡ್ಡಾಯವಾಗಿರುತ್ತದೆ.
6. ಕಾರ್ಯಕ್ರಮ ಮುಗಿದ ತರುವಾಯ ವೆಚ್ಚದ ಮೊತ್ತಕ್ಕೆ ದೃಢೀಕರಿಸಿದ ಮೂಲ ರಸೀದಿಗಳೊಂದಿಗೆ ಉಪಯುಕ್ತತಾ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.
7. ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸುವುದು ಹಾಗೂ ಯಾವುದೇ ರೀತಿಯ ಹೆಚ್ಚಿನ ಅನುದಾನವನ್ನು ನೀಡಲಾಗುವುದಿಲ್ಲ.
8. ದಾಖಲೀಕರಣ ಕಾರ್ಯಕ್ರಮಗಳ ಎಲ್ಲಾ ವಿವರಗಳನ್ನು ಪತ್ರಾಗಾರ ನಿರ್ದೇಶನಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
9. ಕಾರ್ಯಕ್ರಮ ಆಯೋಜಿಸುವವರು ಸದರಿ ಕಾರ್ಯಕ್ರಮಕ್ಕೆ ಸರ್ಕಾರದ ಇನ್ನಿತರೆ ಯಾವುದೇ ಯೋಜನೆಗಳಿಂದ ಅನುದಾನ ಪಡೆದಿರುವುದಿಲ್ಲವೆಂದು ದೃಢೀಕರಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು.
10. ಕಾರ್ಯಕ್ರಮದ ಷರತ್ತುಗಳಿಗೆ ಒಪ್ಪಿ, ಒಪ್ಪಿಗೆ ಪತ್ರ ನೀಡದಲ್ಲಿ ಮಾತ್ರ ಸಂಸ್ಥೆಯ ಖಾತೆಗೆ ಹಣ ಜಮಾ ಮಾಡಲಾಗುವುದು. ( ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ.ಕೋಡ್ ಸಂಖ್ಯೆ, ಆಧಾರ್ ಕಾರ್ಡ್ ಸಂಖ್ಯೆ ಮತ್ತು ಬ್ಯಾಂಕಿನ ವಿಳಾಸ ಹಾಗೂ FORM -09ನ್ನು ಲಗತ್ತಿಸುವುದು).

ತಮ್ಮ ನಂಬುಗೆಯ

ನಿರ್ದೇಶಕರು (ಪ್ರ),
ಕರ್ನಾಟಕ ರಾಜ್ಯ ಪತ್ರಾಗಾರ

10/11/2020